**ದಿನಾಂಕ:11-03-2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**<u>ಮುಖ್ಯ ವಿಚಾರಣೆ : ವಾದಿ ಪರ ಶ್ರೀ.ಆರ್.ವಿ.ಎಂ. ವಕೀಲರಿಂದ</u> :-**

ನಾನು ನನ್ನ ಮೌಖಿಕ ಸಾಕ್ಷಿಯನ್ನು ಶಪಥ ಪತ್ರದ ರೂಪದಲ್ಲಿ ಈಗ ನ್ಯಾಯಾಲಯದಲ್ಲಿ ಸಲ್ಲಿಸುತ್ತಿದ್ದೇನೆ. ಸದರಿ ಶಪಥ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ ಆ ಕಾರಣ ಅವುಗಳಲ್ಲಿಯ ಅಂಶಗಳು ನಿಜವಿರುತ್ತದೆ. ಸದರಿ ಅಂಶಗಳನ್ನು ಓದಿಸಿ ತಿಳಿದುಕೊಂಡ ಮೇಲೆ ಒಪ್ಪಿ ನನ್ನ ಸಹಿ ಮಾಡಿರುತ್ತೇನೆ. ನಾನು ಈ ದಾವೆಗೆ ಸಂಬಂಧ ಪಟ್ಟಂತೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಗೊಳಿಸಲು ವಿನಂತಿಸಿಕೊಳ್ಳುತ್ತೇನೆ.

1) ಜಮೀನಿನ ಸರ್ವೇ ನಂ.36/2 ನೇದ್ದರ 2013-14, 2014-15, 2015-16, 2024-25 ನೇ ಸಾಲಿನ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ.1 ರಿಂದ 4 ಎಂದು ಗುರುತಿಸಲಾಯಿತು.

2) ಜಮೀನಿನ ಸರ್ವೇ ನಂ.125/14 ನೇದ್ದರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.5 ಎಂದು ಗುರುತಿಸಲಾಯಿತು.

3) ಸಹಾಯಕ ಆಯುಕ್ತರು ಬಸವಕಲ್ಯಾಣ ರವರ ಆದೇಶದ ದೃಢೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.6 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಪ್ರತಿವಾದಿ & ಅವರ ಪರ ವಕೀಲರು ಗೈರುಹಾಜರಿದ್ದು, & ದಾವೆಗೆ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**(ಓ.ಹೇ.ಕೇ.ಸ.ಇದೆ)** **ದಿವಾಣಿ ನ್ಯಾಯಾಧೀಶರು**
**ಬಸವಕಲ್ಯಾಣ.**

**ಸಾಕ್ಷಿದಾರರ ಸಹಿ:-**